3. ಹೆಚ್ಚುತ್ತಿರುವ ಬೇಡಿಕೆಯನ್ನು ಸರಿದೂಗಿಸುವ ಸಲುವಾಗಿ ಅಧಿಕಾ ಬಂಡವಾಳ ಹೂಡಿಕೆಗೆ ಅವಕಾಶ ಕಲ್ಪಿಸುವುದು.

4. ನೀರಾವರಿ ಸಂಪುಸೆಟ್ಟು ಭಾಗ್ಯಜ್ಯೋತಿ : ಕುಟೀರ ಜ್ಯೋತಿ ಮುಂತಾದ ಕೆಲವು ವರ್ಗಗಳ ವಿದ್ಯುಚ್ಛಕ್ತಿ ಸ್ಥಾವರಗಳಿಗೆ ಕಡಿಮೆ ಇದೆ.

5. ನಿರ್ವಹಣೆ ಮತ್ತು ಪಾಲನೆ ವೆಚ್ಚದಲ್ಲಿ ಆಗುತ್ತಿರುವ ಹೆಚ್ಚಳ.

6. ನಿಗಮವು ಇತರ ಹಣಕಾಸು ಸಂಸ್ಥೆಗಳಿಂದ ಹಣವನ್ನು ಸಾಲದ ರೂಪದಲ್ಲಿ ತರಬೇಕಾಗಿದೆ. ಇದಕ್ಕೆ ಹೆಚ್ಚಿನ ಬಡ್ಡಿಯನ್ನು ಸಹ ಕೊಡಬೇಕಾಗಿದೆ.

7. ವಿದ್ಯುತ್ ದರಗಳ ಪರಿಷ್ಕರಣೆಯ ಮುಂದೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು (ಕೆ.ಇ.ಆರ್.ಸಿ) ಸಾಧಕ ಭಾಧಕಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಆಯೋಗದ ಸಲಹಾ ಸಮಿತಿಯ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಂಡು ವಿದ್ಯುತ್ ದರಗಳನ್ನು ಪರಿಷ್ಕರಿಸಿದೆ. ಕರ್ನಾಟಕ ವಿದ್ಯುತ್ ದರಗಳನ್ನು ಪರಿಷ್ಕರಿಸಿದೆ. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಆದೇಶದ ಮೇರೆಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ವಿದ್ಯುತ್ ದರವನ್ನು ಏರಿಕೆ ಮಾಡಿರುತ್ತದೆ. ಕರ್ನಾಟಕ ವಿದ್ಯುತ್ ದರವನ್ನು ಏರಿಕೆ ಮಾಡಿರುತ್ತದೆ. ಕರ್ನಾಟಕ ವಿದ್ಯುತ್ ಸರಬರಾಜು ಸುಧಾರಣೆ ಕಾಯ್ದೆ 1999ರ ಪ್ರಕಾರ ವಿದ್ಯುತ್ ದರಗಳ ಪರಿಷ್ಕರಣೆಯನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ನಿರ್ಣಯಿಸಬೇಕಾಗಿರುತ್ತದೆ. ಈ ಆಯೋಗದ ನೀಡುವ ಆದೇಶವನ್ನು ಲೈಸೆನ್ಸೀದಾರನು ಪಾಲಿಸಬೇಕಾಗುತ್ತವೆ. ನಿಯಂತ್ರಣ ಆಯೋಗದ ಆದೇಶವನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಅನುಷ್ಠಾನಗೊಳಿಸಿರುತ್ತದೆ. ಇದರಂತೆಯೇ, ಸಣ್ಣ ಕೈಗಾರಿಕೆ (ಎಲ್.ಟಿ.-5) ಸ್ಥಾವರಗಳಿಗೂ ವಿದ್ಯುತ್ ದರವನ್ನು ಸ್ವಲ್ಪ ಹೆಚ್ಚಳಗೊಳಿಸಲಾಗಿದೆ. ಈ ವಿದ್ಯುತ್ ದರಗಳ ಪರಿಷ್ಕರಣೆಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಬರುವ ಎಲ್.ಟಿ.-5 ವರ್ಷಗಳ ಗ್ರಾಹಕರಿಗೆ ವಿಶೇಷ ರಿಯಾಯಿತಿಯನ್ನು ನೀಡಲಾಗಿದೆ. ಪ್ರತಿ ದಿನ 6 ಗಂಟೆ ಅಥವಾ ಹೆಚ್ಚಿನ ಕಾಲಕ್ಕೆ ವಿದ್ಯುತ್ ಕಡಿತವಿರುವ ಗ್ರಾಮೀಣ ಪ್ರದೇಶಗಳಲ್ಲಿನ ಎಲ್.ಟಿ.-5 ವರ್ಗಗಳ ಗ್ರಾಹಕರಿಗೆ ನಿಗಧಿತ ಶುಲ್ಕದ ಮೇಲಿನ ರಿಯಾಯಿತಿ ಪ್ರತಿ ತಿಂಗಳಿಗೆ; ಪ್ರತಿ ಹೆಚ್.ಪಿ.ಗೆ ರೂ. 10-00 ನ್ನು ನೀಡಲಾಗುವುದು. ನಿಗಮವು ಪ್ರಕಟಿಸಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಕಡಿತವನ್ನು ಜಾರಿಗೊಳಿಸಿದ ಅವಧಿಗೆ ಈ ರಿಯಾಯಿತಿಯು ಅನ್ವಯಿಸುತ್ತದೆ.

ವಿಶ್ವೇಶ್ವರಯ್ಯ ನಾಲಾ ಅಚ್ಚುಕಟ್ಟು ಪ್ರದೇಶದ ನಾಲಾ ಕೊನೆಯ ಭಾಗಕ್ಕೆ ಏತ ನೀರಾವರಿ ಸೌಲಭ್ಯ

1153(1697) ಶ್ರೀ ಎಂ.ಎಸ್. ಆತ್ಮಾನಂದ ಮಂಡ್ಯ : ಮಾನ್ಯ ಬೃಹತ್ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವೇಶ್ವರಯ್ಯ ನಾಲಾ ಅಚ್ಚುಕಟ್ಟು ಪ್ರದೇಶದಲ್ಲಿನ ನಾಲಾ ಕೊನೆಯ ಭಾಗದ ರೈತರ ನೀರಿನ ಕೊರತೆಯನ್ನು ನೀಗಿಸಲು ಏತ ನೀರಾವರಿ ಯೋಜನೆಗಳನ್ನು ಮಂಜೂರಾತಿ ಮಾಡಲಾಗಿದೆಯೆ;

ಅ) ಹಾಗಿದ್ದಲ್ಲಿ, ಅದರ ವಿವರಗಳೇನು;

ಇ) ಏತ ನೀರಾವರಿ ಯೋಜನೆಗಳ ಕಾಮಗಾರಿ ಕುಂಠಿತವಾಗಲು ಕಾರಣಗಳೇನು?

ಈ) ಈ ಕಾಮಗಾರಿಗಳ ತ್ವರಿತ ಅನುಷ್ಠಾನಕ್ಕೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಎಚ್.ಕೆ.ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿ.ಗಳು)

ಅ) ಹೌದು

ಆ)

ಕ್ರಮಸಂ Sl.	ಯೋಜನೆ Project	ನೀರಾವರಿ ಸೌಲಭ್ಯ ಪಡೆಯುವ ಅಚ್ಚುಕಟ್ಟು Atchkat benefitted	ಅಂದಾಜುಮೊತ್ತ Estimated cost
1	2	3	4
1.	ಎಡವನಹಳ್ಳಿ	215	22.00
2.	ಬೆಕ್ಕಳಲೆ	205	21.45
3.	ಕಿರಂಗೂರು	400	22.00
4.	ಹಳೇಹಳ್ಳಿ	125	14.30
5.	ಮೂಡ್ಡ	200	17.60
6.	ತಗ್ಗಹಳ್ಳಿ	335	24.20
7.	ಬೂದಗುಪ್ಪೆ	350	44.00
8.	ಕೆ.ಕೋಡಿಹಳ್ಳಿ	550	59.40
9.	ಕೆ.ಕೋಡಿಹಳ್ಳಿ	550	59.40
10.	ಚಿಕ್ಕನರಸೀನಕೆರೆ	1450	132.00
11.	ಕಾಗೇಹಳ್ಳದ ದೊಡ್ಡಿ	700	41.80
12.	ಕನ್ನಲಿ	300	33.00
13.	ಹುಚ್ಚಲಗೆರೆ	300	33.00
14.	ಕೋಣನಹಳ್ಳಿ	288	22.00

1	2	3	4
15.	ಎತ್ತಗದಹಳ್ಳಿ	200	22.00
16.	ಮರಿಲಿಂಗನದೊಡ್ಡಿ	450	33.00
17.	ಕೀಲಾರ	800	22.00
	ಒಟ್ಟು	**7208**	**593.45**

ಇ) ಏರು ಕೊಳವೆಗೆ (ರೈಸಿಂಗ್ ಮೈನ್) ಅಳವಡಿಸಲು ಅಗತ್ಯವಿರುವ ವಿವಿಧ ವ್ಯಾಸಗಳ ಆರ್.ಸಿ.ಸಿ ಪ್ರೆಷರ್ ಪೈಪು ಮತ್ತು ಕಾಲರ್‌ಗಳ ದರಗಳನ್ನು 1997-98 ನೇ ಸಾಲಿನ ನಂತರ ಸದರಿ ವಿಲೇದಿ ನಿರ್ದೇಶನಾಲಯ, ಬೆಂಗಳೂರು, ಇವರಿಂದ ಅನುಮೋದನೆಯಾಗದ ಕಾರಣದಿಂದ ಪೈಪುಗಳನ್ನು ಹಾಗೂ ಕಾಲರ್‌ಗಳನ್ನು ಖರೀದಿಸಲು ವಿಳಂಬವಾಗಿದೆ ಹಾಗೂ ಸ್ವಾಧೀನ ಪ್ರಕರಣಗಳಿಂದ ವಿಳಂಬ ಮತ್ತು ನಿಂತ ಬೆಳೆಗಳನ್ನು ತೆಗೆಯಲು ರೈತರಿಂದ ಕಾಲಾವಕಾಶ ಕೋರಿಕೆಯಿಂದ ವಿಳಂಬವಾಗಿರುತ್ತದೆ. ಆದಾಗ್ಯೂ ಈಗ ಸದರಿ ಪೈಪು ಮತ್ತು ಕಾಲರ್‌ಗಳ ದರ ವಿಶ್ಲೇಷಣೆಯನ್ನು ಮಾಡಲಾಗಿದ್ದು, ಪೈಪುಗಳನ್ನು ಖರೀದಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದು, ಅಗತ್ಯಕ್ರಮ ಕೈಗೊಳ್ಳಲಾಗುತ್ತಿದೆ.

ಈ) ರೈಸಿಂಗ್ ಮೈನ್ ಪೈಪುಗಳನ್ನು ಸರಬರಾಜು ಮಾಡಲು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಪೂರ್ಣಗೊಂಡ ಎತ ನೀರಾವರಿ ಯೋಜನೆಗಳ ವಿದ್ಯುತ್ ಮತ್ತು ಮೆಕ್ಯಾನಿಕಲ್ ಸರಬರಾಜಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ ಹಾಗೂ ಕೆಲವು ಏತ ನೀರಾವರಿ ಯೋಜನೆಗಳಿಗೆ ಯಂತ್ರೋಪಕರಣಗಳು ಸರಬರಾಜಾಗಿದೆ. ಸದರಿ ಯೋಜನೆಗಳನ್ನು ಮುಗಿಸಲು ನಿರ್ದಿಷ್ಟ ಕಾಲ ಮಿತಿಯನ್ನು ಹಾಕಿಕೊಂಡಿದ್ದು, ಅದರನ್ವಯ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಅಧಿಕ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದಿಸಲು ಕೈಗೊಂಡಿರುವ ಕ್ರಮಗಳು

1154 (1698) ಶ್ರೀ ಆತ್ಮಾನಂದ ಎಂ. ಎಸ್. (ಮಂಡ್ಯ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಪ್ರಸ್ತುತ ಉತ್ಪಾದನೆ ಮಾಡುತ್ತಿರುವ ವಿದ್ಯುತ್ತಿನ ಪ್ರಮಾಣವೆಷ್ಟು;

ಆ) ರಾಜ್ಯದಲ್ಲಿ ಬೇಡಿಕೆ ಇರುವ ವಿದ್ಯುತ್ತಿನ ಪ್ರಮಾಣವೆಷ್ಟು;

ಇ) ರಾಜ್ಯದಲ್ಲಿ ಅವಶ್ಯಕತೆ ಇರುವ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆಯಾಗುತ್ತಿದೆಯೇ;

ಈ) ಹಾಗಿಲ್ಲದಿದ್ದರೆ, ವಿದ್ಯುತ್ ಉತ್ಪಾದನೆಯ ಪ್ರಮಾಣವನ್ನು ಅಧಿಕಗೊಳಿಸಲು ಮತ್ತು ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಲು ರಾಜ್ಯದಲ್ಲಿ ಕೈಗೊಂಡಿರುವ ಕ್ರಮಗಳೇನು?

ಶ್ರೀ ವೀರಕುಮಾರ ಆ.ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ವಿದ್ಯುತ್ ಉತ್ಪಾದನೆಯು ದೈನಂದಿನ ಬೇಡಿಕೆಯನ್ನು ಅವಲಂಬಿಸಿರುತ್ತದೆ. ದೈನಂದಿನ ಬೇಡಿಕೆಯು ಕಾಲಕಾಲಕ್ಕೆ ಬದಲಾಗುತ್ತಿರುತ್ತದೆ. ಪ್ರಸ್ತುತ ರಾಜ್ಯದಲ್ಲಿರುವ ವಿದ್ಯುತ್ ಉತ್ಪಾದನಾ